ESI.A.No.75/2022

AW–1,

ದಿನಾಂಕಃ 15–04–2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ– ಎದುರುದಾರರ ಪರವಾಗಿಃ ಶ್ರೀ.ABN ವಕೀಲರಿಂದ

ದಿನಾಂಕಃ17–4–2009 ರಂದು ನಮ್ಮ ಸಂಸ್ಥೆಗೆ ಎಸ್ ಎಸ್ ಒ ರವರು ಭೇಟಿ ನೀಡಿ ತಪಾಸಣೆ ಮಾಡಿದರು ಎಂದರೆ ನಿಜ. ಆಗ ನಮ್ಮ ಸಂಸ್ಥೆಯಲ್ಲಿ ಲಾಡ್ಜಿಂಗ್ ಮತ್ತು ರೆಸ್ಟೋರೆಂಟ್ ಇತ್ತು ಎಂದರೆ ನಿಜ. ಲಾಡ್ಜಿಂಗ್ ಮತ್ತು ಬೋರ್ಡಿಂಗ್‌ನಲ್ಲಿ ಒಟ್ಟು 17 ಜನ ಕೆಲಸಕ್ಕೆ ಇದ್ದರು ಎಂದರೆ ಸಾಕ್ಷಿ 9 ಜನ ಮಾತ್ರ ಇದ್ದರು ಎನ್ನುತ್ತಾರೆ. ನನ್ನ ಪತ್ನಿ ಅರ್ಜಿದಾರ ಸಂಸ್ಥೆಯ ಪ್ರೊಪ್ರೇಟರ್ ಆಗಿರುತ್ತಾರೆ. ನನ್ನ ಪತ್ನಿಯವರು ಫಾರಂ 01 ನ್ನು ಸಹಿ ಮಾಡಿ ಕೊಟ್ಟಿರುತ್ತಾರೆ ಎಂದರೆ ನಿಜ. ಸಾಕ್ಷಿಯು ಗುರುತಿಸಿದ ದಾಖಲೆ ಫಾರಂನ್ನು ನಿಶಾನೆ ಆರ್–1 ಎಂದು ಗುರುತಿಸಲಾಯಿತು. ಸದರಿ ದಾಖಲೆಯನ್ನು ಮಾಹಿತಿ ಮೇರೆಗೆ ದಿಃ12–6–2009 ರಂದು ನಮ್ಮ ಸಂಸ್ಥೆಯನ್ನು ನೊಂದಾಯಿಸಿಕೊಳ್ಳಬೇಕೆಂದು ನೋಟೀಸ್ ಕೊಟ್ಟರು ಎಂದರೆ ಸುಳ್ಳು. ದಿಃ1–10–2010 ರಿಂದ 30–9–2012 ರ ಅವಧಿಗೆ ಇ ಎಸ್ ಐ ವಂತಿಗೆಯನ್ನು ಕಟ್ಟಬೇಕು ಹಾಗೂ ಖುದ್ದು ಸುನಾವಣೆಗೆ ಹಾಜರಾಗಬೇಕೆಂದು ನಮಗೆ ನೋಟೀಸ್ ಕೊಟ್ಟಿದ್ದರು ಎಂದರೆ ಸುಳ್ಳು. ನಮ್ಮ ಸಂಸ್ಥೆಯವರು ಸದರಿ ನೋಟೀಸನ್ನು ನನಗೆ ಈಗ ತೋರಿಸಿದ ದಾಖಲೆ ಪ್ರಕಾರ ಸೀಲ್ ಹಾಕಿ ಪಡೆದುಕೊಂಡಿದ್ದಾರೆ ಎಂದರೆ ಸಾಕ್ಷಿಯು ಅದನ್ನು ಯಾರು ಪಡೆದುಕೊಂಡಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ಆದರೆ ಅದರಲ್ಲಿರುವ ಸಹಿ ನನ್ನ ಪತ್ನಿಯದ್ದು ಎಂದು ನುಡಿಯುತ್ತಾರೆ. ಸದರಿ ದಾಖಲೆ ನಿಶಾನೆ ಸಿ–18 ನ್ನು ಹಾಗೂ ಅಂಚೆ ಸ್ವೀಕೃತಿಯನ್ನು ಒಟ್ಟಾಗಿ ನಿಶಾನೆ ಆರ್–2 ಎಂದು ಗುರುತಿಸಲಾಯಿತು. ಸಾಕ್ಷಿಯು ಮಾರ್ಚ ತಿಂಗಳಲ್ಲೇ ನಮ್ಮ ರೆಸ್ಟೋರೆಂಟನ್ನು ಮುಚ್ಚಿದ್ದೆವು ಎಂದು ನುಡಿಯುತ್ತಾರೆ. ಆದರೆ ಲಾಡ್ಜಿಂಗ್ ನಡೆಯುತ್ತಿತ್ತು. ಲಾಡ್ಜಿಂಗ್ ಮತ್ತು ರೆಸ್ಟೋರೆಂಟ್ ಒಂದೇ ವಿಳಾಸದಲ್ಲಿತ್ತು ಎಂದರೆ ನಿಜ. ಆ ಎರಡಕ್ಕೂ ಮಾಲೀಕರು ನನ್ನ ಪತ್ನಿ ಲೀಲಾವತಿ ಎಂದರೆ ನಿಜ. ಅವರ ವಿಳಾಸ ನಂ.671, ಇ ಅಂಡ್ ಎಫ್ ಬ್ಲಾಕ್, ಕೂಗುಬಂಡೆ ರಸ್ತೆ, ಕುವೆಂಪುನಗರ, ಮೈಸೂರು. ಆ ವಿಳಾಸಕ್ಕೆ ಕಳುಹಿಸಿದ ಪತ್ರವನ್ನು ತಿರಸ್ಕರಿಸಲಾಗಿದೆ ಎಂದು ವಾಪಸ್ಸು ಕಳುಹಿಸಿದ್ದಾರೆ ಎಂದರೆ ನಿಜ. ಸಾಕ್ಷಿಯು ಗುರುತಿಸಿದ ಜೆರಾಕ್ಸ ದಾಖಲೆಯನ್ನು ನಿಶಾನೆ ಆರ್–3 ಎಂದು ಗುರುತಿಸಲಾಯಿತು. ಆನಂತರ ದಿಃ1–8–2013 ರಂದು ಇನ್ನೊಂದು ಸಿ–18 ನೋಟೀಸನ್ನು ಕಳುಹಿಸಿದರು ಅದನ್ನು ನಮ್ಮ ಹೋಟೇಲ್ ನವರು ಪಡೆದುಕೊಂಡಿದ್ದಾರೆ ಎಂದರೆ ಅದರಲ್ಲಿ ನಮ್ಮವರ ಸಹಿ ಅಲ್ಲ ಯಾರೋ ಗೀಚಿಕೊಂಡಿದ್ದಾರೆ. ನಾವು ನೋಟೀಸ್ ಪಡೆದು ಖುದ್ದು ಸುನಾವಣೆಗೆ ಹಾಜರಾಗದೇ ಇರುವುದರಿಂದ ಎದುರುದಾರರು ರೂ.2,18,970–00 ಗಳನ್ನು ಪಾವತಿಸಬೇಕೆಂದು ಆದೇಶ ಮಾಡಿದರು ಎಂದರೆ ನನಗೆ ಗೊತ್ತಿಲ್ಲ. ನಾನು ಹೋಟೇಲನ್ನು ಮುಚ್ಚಿದರೂ ಕೂಡ ಮೇಲಿಂದ ಮೇಲೆ ನೋಟೀಸ್ ಕೊಟ್ಟು ವಂತಿಗೆಯನ್ನು

ESI.A.No.75/2022

AW-1,

ಪಾವತಿಸಬೇಕೆಂದು ಹೇಳಿದ್ದರಿಂದ ಈ ಕೇಸನ್ನು ಹಾಕಿದ್ದೇನೆ. ಯಾವ ಆದೇಶದ ಮೇಲೆ ಈ ಕೇಸನ್ನು ಹಾಕಿದ್ದೇನೆ ಎಂದು ನಮ್ಮ ವಕೀಲರು ಹೇಳುತ್ತಾರೆ ನನಗೆ ಹೇಳಲು ಆಗುವುದಿಲ್ಲ. ಎಷ್ಟು ಹಣ ಪಾವತಿಸಬೇಕೆಂದು ಆದೇಶ ಮಾಡಿದ್ದಾರೆಂದು ನನಗೆ ಗೊತ್ತಿಲ್ಲ. ನಾನು 2013 ರಲ್ಲಿ ನಮ್ಮ ಹೋಟೇಲನ್ನು ಕ್ಲೋಸ್ ಮಾಡಿದ್ದೇನೆಂದು ನಾನು ಪತ್ರವನ್ನು ಕೊಟ್ಟಿಲ್ಲ. ಆದರೆ ಆದೇಶವಾದ ಮೇಲೆ ನಾನು ನಮ್ಮ ರೆಸ್ಟೋರೆಂಟ್ ಕ್ಲೋಸ್ ಆಗಿದೆ ಎಂದು ತಿಳಿಸಿದ್ದೇನೆ ಎಂದರೆ ಸರಿಯಲ್ಲ ನಾನು ಮೊದಲೇ ತಿಳಿಸಿದ್ದೇನೆ. 2013 ಮಾರ್ಚ ನಲ್ಲಿ ನಮ್ಮ ಹೋಟೇಲನ್ನು ಮುಚ್ಚಿದ್ದೇನೆ ಎಂದು ನಾನು ನನ್ನ ಹೇಳಿಕೆಯನ್ನು ಕೊಟ್ಟಿದ್ದೇನೆ ಅದನ್ನು ಅವರ ಕಛೇರಿಯಲ್ಲೇ ಕೊಟ್ಟಿದ್ದೇನೆ ಆ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ಆ ಪತ್ರದಲ್ಲಿ ದಿನಾಂಕವನ್ನು ನಮೂದಿಸಲಾಗಿರುತ್ತದೆ. 2013 ರಲ್ಲಿ ನಾನು ಯಾವುದೇ ಹೇಳಿಕೆಯನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆ ರೀತಿಯುಲ್ಲಿ ಪತ್ರವನ್ನು 2021 ರಲ್ಲಿ ಕೊಟ್ಟಿದ್ದೇನೆ ಎಂದರೆ ನೆನಪಿಲ್ಲ. ನನ್ನ ಲಾಡ್ಜಿಂಗ್‌ನಲ್ಲಿ 9 ಜನ ಕೆಲಸಗಾರರು ಇದ್ದರು. ನನ್ನ ಲಾಡ್ಜಿಂಗ್ ಮತ್ತು ರೆಸ್ಟೋರೆಂಟ್ ಎರಡೂ ಸೇರಿ ಒಟ್ಟು 9 ಜನ ಕೆಲಸಗಾರರು ಇದ್ದರು. 2013 ಕ್ಕಿಂತ ಮುಂಚೆ ನಮ್ಮ ಬಳಿ ಎಷ್ಟು ಜನ ಕೆಲಸಗಾರರು ಇದ್ದರು ಮತ್ತು ಅವರಿಗೆ ಎಷ್ಟು ವೇತನ ಪಾವತಿ ಮಾಡುತ್ತಿದ್ದೆವು ಎಂಬ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ ನಿಜ. ನಾನು ಅಟೆಂಡೆನ್ಸ ರಿಜಿಸ್ಟರ್ ಮತ್ತು ಪೇಮೆಂಟ್ ರಿಜಿಸ್ಟರನ್ನು ಈ ನ್ಯಾಯಾಲಯಕ್ಕೂ ಕೊಟ್ಟಿದ್ದೇನೆ ಇ ಎಸ್ ಐ ಆಫೀಸಿಗೂ ಕೊಟ್ಟಿದ್ದೇನೆ. ನಮ್ಮ ಸಂಸ್ಥೆಗೆ ಎಸ್ ಎಸ್ ಒ ರವರು ಭೇಟಿ ನೀಡಿದಾಗ 17 ಜನ ಕಾರ್ಮಿಕರು ಇದ್ದರು ಆದ್ದರಿಂದ ಎದುರುದಾರರು ಕೇಳಿದಂತೆ ಇ ಎಸ್ ಐ ವಂತಿಗೆಯನ್ನು ಪಾವತಿ ಮಾಡಲು ನಾನು ಬದ್ಧನಾಗಿದ್ದೇನೆ ಎಂದರೆ ಸುಳ್ಳು. ನಾನು ನ್ಯಾಯಾಲಯಕ್ಕೆ ಪ್ರಾಫಿಟ್ ಅಂಡ್ ಲಾಸ್ ಅಕೌಂಟ್ ದಾಖಲೆಯನ್ನು ಕೊಟ್ಟಿಲ್ಲ ಎಂದರೆ ನಿಜ. ನನಗೆ ಈ ಕೇಸಿನ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ರುಡೋಲ್ಫ್ ಪಿರೇರಾ),
ಅಧ್ಯಕ್ಷಾಧಿಕಾರಿಗಳು/ಜಡ್ಜ್
ಇ.ಎಸ್.ಐ.ನ್ಯಾಯಾಲಯ,
ಮೈಸೂರು.